ಇಂದು ದಿ: **22.01.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು **5** ರಿಂದ **9** ನೇ ಪ್ರತಿವಾದಿಗಳ ಪರಃ ಶ್ರೀ ಆರ್ ಕೆ ವಕೀಲರಿಂದ

ನಾನು ಪಿಯುಸಿ ವರೆಗೆ ಓದಿರುತ್ತೇನೆ. ನನಗೆ ವ್ಯವಹಾರ ಜ್ಞಾನ ಇರುತ್ತದೆ. ನಾನು, ನಮ್ಮ ಅಣ್ಣ ಗುರುಸಿದ್ದಪ್ಪ ಮತ್ತು ಡಿ. ಭೈರಪ್ಪ ಸಾಕ್ಷಿ ಹೇಳು 3 ಬಾರಿ ಒಟ್ಟಿಗೆ ಬಂದಿರುತ್ತೇವೆ. ನ್ಯಾಯಾಲಯಕ್ಕೆ ಬರುವಾಗ ಕೇಸಿನ ವಿಚಾರವನ್ನು ಗುರುಸಿದ್ದಪ್ಪ ನಮಗೆ ಹೇಳಿರುತ್ತಾರೆ ಎನ್ನುವುದು ನಿಜ. ಅದೇ ರೀತಿ ನಾನು ಮತ್ತು ಡಿ. ಭೈರಪ್ಪ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿರುತ್ತೇವೆ ಎನ್ನುವುದು ನಿಜ. ನನ್ನ ಮತ್ತು ಪಿ.ಡಬ್ಲ್ಯೂ 3 ರವರ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ವಿಷಯಗಳನ್ನು ಗುರುಸಿದ್ದಪ್ಪ ಹೇಳಿ ಬೆರಳಚ್ಚು ಮಾಡಿಸಿರುತ್ತಾನೆ ಎನ್ನುವುದು ನಿಜ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ವಿಷಯಗಳು ಗೊತ್ತಿಲ್ಲ ಎನ್ನುವುದು ನಿಜ. ನಮ್ಮ ತಾಯಿಯಿ ಹೆಸರು ಗೌರಮ್ಮ ಗುರುಸಿದ್ದಪ್ಪನ ತಾಯಿಯ ಹೆಸರು ಗೌರಮ್ಮ. ಸದರಿ ಗುರುಸಿದ್ದಪ್ಪ ನಮಗೆ ಸಂಬಂಧ ಇಲ್ಲ ಪರಿಚಯ ಮಾತ್ರ. ಜೊತೆಯಲ್ಲಿ ಬಂದಾಗ ತೋಟಕ್ಕೆ ಕರೆದುಕೊಂಡು ಹೋಗುತ್ತಿದ್ದ. 15-20 ವರ್ಷಗಳಿಂದ ಪರಿಚಯ. ಡಿ.ಭೈರಪ್ಪ ನಾನು ಸಣ್ಣವನಿದ್ದಾಗಿನಿಂದಲೂ ನೋಡಿರುತ್ತೇನೆ. ಡಿ. ಬೈರಪ್ಪ ಮತ್ತು ಗುರುಸಿದ್ದಪ್ಪ ಇಬ್ಬರು ಪರಿಚಯ. ನನ್ನ ತಾಯಿಯ ಕಡೆಯಿಂದ ಗುರುಸಿದ್ದಪ್ಪ ಸಹೋದರ ಸಂಬಂಧಿ ಎಂದರೆ ಸರಿಯಲ್ಲ. ನಮ್ಮ ತಾಯಿ ಮತ್ತು ಗುರುಸಿದ್ದಪ್ಪನ ತಾಯಿ ಅಕ್ಕತಂಗಿಯರು ಎಂದರೆ ಸರಿಯಲ್ಲ. ಗುರುಸಿದ್ದಪ್ಪನ ತಾಯಿ ತವರು ಮನೆ ನಮ್ಮ ಊರು. ಅವರೇ ಬೇರೆ ವಠಾರವದರು ನಾವೇ ಬೇರೆ ವಠಾರದವರು. ಹೊಸದುರ್ಗದ ಉಪನೊಂದಣಾಧಿಕಾರಿ ಕಛೇರಿಗೆ ನಾನು 2 ಬಾರಿ ಹೋಗಿರುತ್ತೇನೆ. ಮೊದಲ ಬಾರಿಗೆ ನಾನು 04.04.2019 ಇಸವಿಯಲ್ಲಿ ಹೋಗಿರುತ್ತೇನೆ. ನಾನು, ಡಿ. ಭೈರಪ್ಪ, ಗುರುಸಿದ್ದಪ್ಪ ಮತ್ತು ಅವನ ಹೆಂಡತಿ ಆಶಾ ಮತ್ತು ಮಂಚಿಗೇನಳ್ಳಿಯಿಂದ 4 ಜನರು ಸೇರಿ ಹೋಗಿದ್ದೇವು. ನಾಕಿಕರೆಗೆಯಿಂದ ನಂದನಹೊಸೂರಿಗೆ ಹೋಗಿ ಅಲ್ಲಿಂದ ಮಂಚಿಗೇನಳ್ಳಿಗೆ ಹೋಗಿ ನಂತರ ಹೊಸದುರ್ಗಕ್ಕೆ ಬಂದಿರುತ್ತೇವೆ. ನಮ್ಮ ಊರನ್ನು ಬಿಟ್ಟಾಗ ಬೆಳಗ್ಗೆ 7-30 ಆಗಿತ್ತು. ನಾನು ವ್ಯವಸಾಯದ ಕೆಲಸ ಮುಗಿಸಿ 7-45 ಯಿಂದ 8-00 ಗಂಟೆಗೆ ನಮ್ಮ ಊರಿಂದ ಹೊರಟಿರುತ್ತೇನೆ. ಗುರುಸಿದ್ದಪ್ಪ ಫೋನ್ ಮಾಡಿದ್ದರಿಂದ ನಾನು ನಂದನಹೊಸೂರಿನಿಂದ ಹೋಗಿರುತ್ತೇನೆ. ನಂದನಹೊಸೂರಿನಿಂದ 8.30 ಕ್ಕೆ ಬಿಟ್ಟಿರುತ್ತೇವೆ. ಮಂಚೇನಹಳ್ಳಿಗೆ 9.00 ಗಂಟೆಗೆ ಹೋಗಿರುತ್ತೇವೆ. ಮಂಚೇನಹಳ್ಳಿಯಿಂದ 10.00 ಗಂಟೆಗೆ ಬಿಟ್ಟು ಹೊಸದುರ್ಗಕ್ಕೆ ಬಂದಿರುತ್ತೇವೆ. ಹೊಸದುರ್ಗಕ್ಕೆ 11 ಗಂಟೆಗೆ ಬಂದಿರುತ್ತೇವೆ. ಹೊಸದುರ್ಗದಲ್ಲಿ ಮಹಂತೇಶ್, ಪತ್ರ ಬರಹಗಾರ ಇವನನ್ನು ಕಂಡಿರುತ್ತೇವೆ. ಪತ್ರ ಬರಹಗಾರರಿಗೆ ಗುರುಸಿದ್ದಪ್ಪ ಹೇಳಿರುತ್ತಾರೆ. ಆ ಸಮಯದಲ್ಲಿ ಅವನ ಹೆಂಡತಿ ಆಶಾ ಮತ್ತು ಮಂಚಿಗೇನಹಳ್ಳಿಯ ಹೆಸರು ಮಲಸಿಂಗನಹಳ್ಳಿ ಇದ್ದು, ನಾವು ಮಂಚಿಗೇನಹಳ್ಳಿ ಎಂದು ಕರೆಯುತ್ತೇವೆ. ಆ ಸಮಯದಲ್ಲಿ ಅವನ ಹೆಂಡತಿ ಆಶಾ ಮತ್ತು ಮಲಸಿಂಗನಹಳ್ಳಿಯ ನಾಗೇಂದ್ರಪ್ಪ, ಶರಣಪ್ಪ, ಆಂಜಿನಪ್ಪ ಮತ್ತು ದ್ಯಾಮಪ್ಪ ಹಾಗೂ ಡಿ. ಭೈರಪ್ಪ ಇದ್ದರು. ಮಹಂತೇಶ್ ಬ್ಯಾಂಕಿಗೆ ಹೋಗಿ ಚಲನ್ ನ್ನು

ತುಂಬಿರುತ್ತಾನೆ. ಯಾವ ಬ್ಯಾಂಕಿಗೆ ಹೋಗಿದ್ದ ಎಂದು ಗೊತ್ತಿರುವುದಿಲ್ಲ. ಬ್ಯಾಂಕಿಗೆ ಹೋಗಿ ಅರ್ಧ ಗಂಟೆಯಲ್ಲಿ ವಾಪಸ್ ಬಂದಿರುತ್ತಾನೆ. ಪತ್ರ ತಯಾರು ಮಾಡಿ ಮಧ್ಯಾಹ್ನ ನಮ್ಮನ್ನು ತಾಲ್ಲೂಕ ಅಫೀಸಿಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಪತ್ರ 12 ಗಂಟೆಯ ಒಳಗೆ ತಯಾರಿ ಆಗಿರಬಹುದು. ನಿಖರವಾಗಿ ಪತ್ರ ಎಷ್ಟು ಗಂಟೆಗೆ ತಯಾರು ಆಗಿದೆ ಎಂದು ಹೇಳಲು ಆಗುವುದಿಲ್ಲ. ಮಧ್ಯಾಹ್ನ 2-00 ಗಂಟೆಯ ಒಳಗೆ ನಾವು ಸಹಿಯನ್ನು ಮಾಡಿರುತ್ತೇವೆ. ಉಪನೊಂದಣಾಧಿಕಾರಿಯ ಮುಂದೆ ಸಹಿ ಮಾಡಿರುತ್ತೇವೆ. ಹಣದ ವ್ಯವಹಾರ 10,80,000/- ರೂ.ಗಳಿಗೆ ಆಗಿರುತ್ತದೆ. ಸದರಿ ಪತ್ರಕ್ಕೆ ನಾಗೇಂದ್ರಪ್ಪ, ಶರಣಪ್ಪ, ಆಂಜಿನಪ್ಪ ಮತ್ತು ದ್ಯಾಮಪ್ಪ ಸಹಿ ಮಾಡಿರುತ್ತಾರೆ. ಆಶಾ ಇವಳು ಸಹಿ ಮಾಡಿರುತ್ತಾಳೆ. ಸಾಕ್ಷಿದಾರರಾಗಿ ನಾನು ಮತ್ತು ಡಿ. ಭೈರಪ್ಪ ಸಹಿ ಮಾಡಿರುತ್ತೇವೆ. ಪತ್ರ ಬರಹಗಾರ ಸಹಿ ಮಾಡಿರುತ್ತಾನೆ. ಮಲಸಿಂಗನಹಳ್ಳಿಯಲ್ಲಿ ಬೆಳಗ್ಗೆ 4,60,000/- ರೂ.ಗಳನ್ನು ಆಶಾ ಇವಳು ಆಂಜಿನಪ್ಪ ಇವನ ಕೈಗೆ ಕೊಟ್ಟಿರುತ್ತಾಳೆ. ಸದರಿ ವಿಷಯ ಪತ್ರದಲ್ಲಿ ಇರುತ್ತದೆ. ಸದರಿ ಪತ್ರವನ್ನು ನಾನು ಪೂರ್ತಿಯಾಗಿ ಓದಿಲ್ಲ. ಪತ್ರದಲ್ಲಿ ಏನು ಬರೆದಿರುತ್ತಾರೆ ಎಂದು ಗೊತ್ತಿಲ್ಲ ಸಾಕ್ಷಿ ಮುಂದುವರೆದು ಹೊಲ ಕೊಟ್ಟಿದ್ದು, ತೆಗೆದುಕೊಂಡಿದ್ದು ಆಗ ಹಣ ಕೊಟ್ಟಿರುವುದನ್ನು ಬರೆದಿರುತ್ತಾರೆ ಎಂದು ಹೇಳುತ್ತಾರೆ. ಪತ್ರ ಬರೆದಾಗ ನಾನು ಡಿ. ಭೈರಪ್ಪ ಇದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಏನೇನು ಹಣದ ವ್ಯವಹಾರ ಆಗಿದೆ ಎಂದು ಹೇಳಿರುತ್ತೇವೆ ಅದೆಲ್ಲ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಯಾವುದೇ ಕ್ರಯದ ವ್ಯವಹಾರ ಆಶಾ ಹಾಗೂ ನಾಗೇಂದ್ರಪ್ಪ, ಶರಣಪ್ಪ, ಆಂಜಿನಪ್ಪ ಮತ್ತು ದ್ಯಾಮಪ್ಪ ಇವರ ಮಧ್ಯೆ ನಡೆದಿಲ್ಲ ಎಂದರೆ ಸರಿಯಲ್ಲ. ಆ ದಿನ ಗುರುಸಿದ್ದಪ್ಪ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಗುರುಸಿದ್ದಪ್ಪ ಇದ್ದ ಕುರಿತು ನಾನು ಯಾವುದೇ ದಾಖಲೆ ನೋಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಯಲ್ಲಿ 10,80,000/- ರೂ. ಗಳಿಗೆ ವ್ಯವಹಾರ ಮಾಡಿ 4,60,000/- ಗಳನ್ನುಪಡೆದಿರುತ್ತಾರೆ ಎಂದು ಸುಳ್ಳು ಹೇಳಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ಅವರು ಮಧ್ಯೆ ಯಾವುದೇ ಕ್ರಯದ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ದಿಃ 04.04.2019 ರಂದು ನೊಂದಾಯಿತ ಕ್ರಯದ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಗುರುಸಿದ್ದಪ್ಪ, ಡಿ. ಭೈರಪ್ಪ ಮತ್ತು ನಾನು ಹಾಜರಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ಮೋಸ ಮಾಡುವ ಸಲುವಾಗಿ ಶರಣಪ್ಪ, ಆಶಾ ಮತ್ತು ಅವಳ ಗಂಡ ಹಾಗು ಸಾಕ್ಷಿದಾರರು ಸೇರಿ ಕ್ರಯದ ಕರಾರು ಪತ್ರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ಸಹ ಗುರುಸಿದ್ದಪ್ಪನ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಗುರುಸಿದ್ದಪ್ಪ ಕ್ರಯದ ಕರಾರು ಪತ್ರಕ್ಕೆ ಸಹಿ ಮಾಡಿಲ್ಲ. ಕ್ರಯದ ವ್ಯವಹಾರ ಆದ ಹಿಂದೆ ಮತ್ತು ಅದರ ಮುಂದಿನ ಸದರಿ ಜಮೀನಿನ ವ್ಯವಹಾರದ ಬಗ್ಗೆ ಗೊತ್ತಿರುವುದಿಲ್ಲ. ನಗದು ಹಣ ಕೊಟ್ಟಿರುತ್ತಾರೆ. 500 ಮುಖಬೆಲೆಯ ನೋಟುಗಳು ಇದ್ದವು. ಎಷ್ಟು ಕಟ್ಟುಗಳು ಇದ್ದವು ಎಂದು ಗೊತ್ತಿರುವುದಿಲ್ಲ. 4,60,000/- ರೂ.ಗಳು ಇದೆ ಎಂದು ಆಂಜಿನಪ್ಪನ ಕೈಗೆ ಕೊಟ್ಟಿರುತ್ತಾರೆ, ಅದನ್ನು ನಾವು ಏಣಿಕೆ ಮಾಡಿಲ್ಲ ಅವರು ಏಣಿಕೆ ಮಾಡಿಕೊಂಡಿರುತ್ತಾರೆ. ಅವರು ಹಣ ಕೊಟ್ಟಿಲ್ಲ ಏಣಿಕೆ ಮಾಡುವ ಸಂದರ್ಭ ಬಂದಿಲ್ಲ ಎಂದರೆ ಸರಿಯಲ್ಲ. ಹಣ ಕೊಡದ ಕಾರಣ ಎಷ್ಟು ಕಟ್ಟು ಹಣ ಇತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಕ್ರಯದ ಕರಾರು ಪತ್ರಕ್ಕೆ 2 ಕಡೆ ಸಹಿಯನ್ನು ಮಾಡಿರುತ್ತೇನೆ. ಭೈರಪ್ಪ ಎಷ್ಟು ಕಡೆ ಸಹಿ ಮಾಡಿರುತ್ತಾನೆ ಎಂದು ನೋಡಿಲ್ಲ. ಸಿದ್ದೇಶ ಸಹಿ ಮಾಡಿರುವುದನ್ನು ನಾನು ನೋಡಿಲ್ಲ. ಭೈರಪ್ಪ,ಸಿದ್ದೇಶ 2 ಕಡೆ ಸಹಿ ಮಾಡಿರುತ್ತಾರೆ. ನಾಗೇಂದ್ರಪ್ಪ, ಶರಣಪ್ಪ, ಆಂಜಿನಪ್ಪ ಮತ್ತು ದ್ಯಾಮಪ್ಪ ಇವರು ಎಷ್ಟು ಕಡೆ ಸಹಿ ಮಾಡಿರುತ್ತಾರೆ ಎಂದು ನೋಡಿಲ್ಲ. ಶರಣಪ್ಪ ನನಗೆ ಮೊದಲು ಪರಿಚಯ ಇರಲಿಲ್ಲ. ನಾನು ಗುರುಸಿದ್ದಪ್ಪನ ಮಾತನ್ನು ಕೇಳಿ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಷ್ಟು ಹಣ ಕೊಟ್ಟಿರುತ್ತಾರೆ ಎಂದು ನಾನು ನೋಡಿಲ್ಲ. ಆ ದಿನ ಕೊಡಲು ಅವರ ಬಳಿ ಹಣ ಇರಲಿಲ್ಲ ಎಂದರೆ ಸರಿಯಲ್ಲ. ನಾನು, ಸಾಕ್ಷಿದಾರರು ಸೇರಿಕೊಂಡು ಆಂಜಿನಪ್ಪ ಇವರ ಆಸ್ತಿಯನ್ನು ಹೊಡೆಯಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಂಜಿನಪ್ಪ ಯಾವುದೇ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ಆಂಜಿನಪ್ಪನ ಕೈಯಲ್ಲಿ 4,60,000/- ಹಣ ಕೊಟ್ಟಿರುತ್ತದೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿಲ್ಲ. ಸದರಿ ಹಣ ದ್ಯಾಮಪ್ಪ ನ ಮನೆಯಲ್ಲಿ ಕೊಟ್ಟಿರುತ್ತದೆ. ಸದರಿ ದ್ಯಾಮಪ್ಪನ ಮನೆಯಲ್ಲಿ ಹಣ ಕೊಟ್ಟಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದು, ನಾವೆಲ್ಲರು ಸೇರಿ ಈ ವ್ಯವಹಾರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.